ದಿನಾಂಕಃ **17-09-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ಎಂ.ಎಸ್.ರವರಿಂದಃ

**1.** ಸರ್ವೆ ನಂಃ131/5 ರಲ್ಲಿ ನನಗೆ ಸೇರಿದ ಯಾವುದೇ ಸ್ವತ್ತು ಇಲ್ಲ. ಸರ್ವೆ ನಂಃ131/5 ರಲ್ಲಿ ನಾನು ಅನಧಿಕೃತವಾಗಿ ಸಾಗುವಳಿ ಮಾಡುವ ಸಂದರ್ಭ ಬಂದಿಲ್ಲ. ಸರ್ವೆ ನಂಃ131/3 ನ್ನು ದೇವರಾಜೇಗೌಡರವರಿಂದ ನನ್ನ ದೊಡ್ಡಪ್ಪ ಕೆಂಪೇಗೌಡ ಖರೀದಿಸಿದ್ದರು. ನನ್ನ ದೊಡ್ಡಪ್ಪನ ನಿಡಿ-4 ಮತ್ತು 5 ರ ಕ್ರಯ ಪತ್ರದಲ್ಲಿ ಪೂರ್ವಕ್ಕೆ ನಾಲೆ ತೋರಿಸಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪ ನಿಡಿ-4 ಮತ್ತು 5 ರ ಕ್ರಯ ಪತ್ರದ ಸ್ವತ್ತಿನಲ್ಲಿ 20 ವರ್ಷ ಸ್ವಾದೀನದಲ್ಲಿದ್ದರು. ನನ್ನ ದೊಡ್ಡಪ್ಪ ತಾನೂ ಖರೀದಿಸಿದ ಸ್ವತ್ತನ್ನು ಅಳತೆ ಮಾಡಿಸಿದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿಯು ನನಗೆ ಸ್ವತ್ತುಗಳನ್ನು ಮಾರಾಟ ಮಾಡುವಾಗ ನನ್ನ ದೊಡ್ಡಪ್ಪ ಅಳತೆ ಮಾಡಿಸಿ ನನಗೆ ಕೊಟ್ಟರು ಎಂದು ನುಡಿಯುತ್ತಾರೆ. ನಿಡಿ-4 ಮತ್ತು 5 ಒಂದೇ ಸರ್ವೆ ನಂಬರ್ ಸ್ವತ್ತಿಗೆ ಸಂಬಂದಿಸಿದ್ದು ಎಂದರೆ ಸರಿ. ನಾನು ಸ್ವತ್ತುಗಳನ್ನು ಖರೀದಿಸುವಾಗ ಅಳತೆ ಮಾಡಿಸಿದ ಸರ್ವೆ ದಾಖಲೆಗಳು ನನ್ನ ಬಳಿ ಇಲ್ಲ. ನನ್ನ ಸ್ವತ್ತಿನ ಪೂರ್ವಕ್ಕೆ ನಿಡಿ-6 ರಲ್ಲಿ ನಾಲೆ ತೋರಿಸಿಲ್ಲ ಎಂದರೆ ಸರಿ. ನನ್ನ ಸ್ವತ್ತಿನ ಒಳಗೆ ನಾಲೆ ಬರುತ್ತದೆಯೋ ಇಲ್ಲವೊ ನನಗೆ ಗೊತ್ತಿಲ್ಲ.

**2**. ನಾನು ಸ್ವತ್ತನ್ನು ಖರೀದಿಸಿದಾಗ ವ್ಯವಸಾಯದ ಜಮೀನೇ ಆಗಿತ್ತು. ನನ್ನ ಜಮೀನು 12 ಗುಂಟೆಗೆ ಸುತ್ತಲು ಕಾಂಪೌಂಡ್ ಹಾಕಿದ್ದೇನೆ. 12 ಗಂಟೆಯಲ್ಲಿ 5 ಗುಂಟೆಯನ್ನು ಅನ್ಯಕ್ರಾಂತ ಮಾಡಿಸಿದ್ದೇನೆ. ಅನ್ಯಕ್ರಾಂತ ಮಾಡಿಸುವಾಗ ತಹಶೀಲ್ದಾರ್ ರವರಿಗೆ ನಾನೇ ಅರ್ಜಿ ಕೊಟ್ಟಿದ್ದು, ಅಳತೆ ಮಾಡಿದ್ದಾರೆ. ಸರ್ಕಾರವು ನನಗೆ 5 ಗುಂಟೆಗೆ ವ್ಯವಸಾಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿದ್ದಾರೆ. ಪಹಣಿಯು ಉಳಿದ 7 ಗುಂಟೆಗೆ ಬರುತ್ತಿದೆ. 5 ಗುಂಟೆಗೆ ಪ್ರತ್ಯೇಕವಾಗಿ ದುರಸ್ತಿಯಾಗಿ ಹದ್ದುಬಸ್ತು ಆಗಿದೆ ಎಂದರೆ ಸರಿ. 7 ಗುಂಟೆಗೆ ಸರ್ವೆ ನಂಃ131/3(ಎ) ಎಂದು 5 ಗುಂಟೆಗೆ ಸರ್ವೆ ನಂಃ131/3(ಬಿ-ಪೈಕಿ) ಎಂದು ನನ್ನ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸರಿ. ನಾನು 5 ಗುಂಟೆ ಸ್ವತ್ತನ್ನು ಅನ್ಯಕ್ರಾಂತ ಮಾಡಿಸುವಾಗ ಸಲ್ಲಿಸಿದ ಅರ್ಜಿ ಮತ್ತು ಅಳತೆ ಮಾಡಿಸಿದ

ದಾಖಲೆಗಳು ನನ್ನ ಬಳಿ ಇವೆ. ನಾನು 12 ಗುಂಟೆಗೂ ಅನ್ಯಕ್ರಾಂತ ಮಾಡಿಸಲು ಅರ್ಜಿ ಕೊಟ್ಟಿದ್ದೆ ಎಂದರೆ ನೆನಪಿಲ್ಲ.

**3.** ಸಾಕ್ಷಿಗೆ ತಾನು ಉಪವಿಭಾಗಾಧಿಕಾರಿ, ಪಾಂಡವಪುರರವರಿಗೆ ಸರ್ವೇ ನಂಃ131/3ರ 12 ಗುಂಟೆಗೆ ಅನ್ಯಕ್ರಾಂತ ಮಾಡಲು ನೀಡಿದ ಅರ್ಜಿ, ಪಹಣಿ, ಗ್ರಾಮ ನಕ್ಷೆ, ಸರ್ವೇ ಸ್ಕೆಚ್, ಮಹಜರ್, ಉಪವಿಭಾಗಾಧಿಕಾರಿರವರ ಕಛೇರಿ ಆದೇಶ ಮತ್ತು ಒಡಂಬಡಿಕೆ ಪ್ರಮಾಣ ಪತ್ರಗಳ ದೃಢೀಕೃತ ನಕಲನ್ನು ಮತ್ತು ಹಿಸ್ಸಾ ಸರ್ವೇ ಟಿಪ್ಪಣಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**42** ರಿಂದ **49** ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ದೃಢೀಕೃತ ನಕಲುಗಳಲ್ಲಿರುವ ತನ್ನ ಸಹಿಗಳನ್ನು ಒಪ್ಪಿಕೊಂಡಿರುತ್ತಾರೆ. ನಿಪಿ-43 ರಿಂದ ನಿಪಿ-49 ರ ದಾಖಲೆಗಳನ್ನು ನನ್ನ ಖುದ್ದು ಸಮಕ್ಷಮದಲ್ಲಿ ತಯಾರಿಸಿದ್ದಾರೆ ಎಂದರೆ ಸರಿ. ಆಗ ನನ್ನ ಸ್ವತ್ತಿನ ಪೂರ್ವಕ್ಕೆ ನಾಲೆ ಇಲ್ಲವೆಂಬುದು ತಿಳಿಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಮತ್ತೆ ಉತ್ತರಿಸುತ್ತ ನಾಲೆ ಇತ್ತು ಎಂದು ನುಡಿಯುತ್ತಾರೆ. ನನ್ನ ಸ್ವತ್ತಿನ ಪೂರ್ವಕ್ಕೆ ನಾಲೆ ಇರುವ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ. ಅನ್ಯಕ್ರಾಂತವಾದ 5 ಗುಂಟೆ ಮತ್ತು ಉಳಿಕೆ 7 ಗುಂಟೆಯ ಜಾಗದಲ್ಲಿ ನಾನು ಒಂದು ಆರ್.ಸಿ.ಸಿ ಮನೆ, 2 ಮಂಗಳೂರು ಹಂಚಿನ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು 5 ಗುಂಟೆ ಜಾಗದಲ್ಲಿ ಆರ್.ಸಿ.ಸಿ. ಮನೆ ಕಟ್ಟಿದ್ದೇನೆ, 7 ಗುಂಟೆ ಜಾಗವು ಅನ್ಯಕ್ರಾಂತವಾಗದಿದ್ದರೂ ಪಂಚಾಯಿತಿ ಸ್ವತ್ತು ಎಂದು ಖಾತೆಯಾಗಿತ್ತು ಆ ಕಾರಣ ಅಲ್ಲಿ 1 ಮಂಗಳೂರು ಹಂಚಿನ ಮನೆ ಕಟ್ಟಿದ್ದು ಮತ್ತೊಂದು ದನದ ಕೊಟ್ಟಿಗೆಯಾಗಿದೆ ಎಂದು ನುಡಿಯುತ್ತಾರೆ. 5 ಗುಂಟೆ ಸ್ವತ್ತು ಪಂಚಾಯಿತಿಯಲ್ಲಿ ಖಾತೆಯಾಗಿದೆ. ಕೆನ್ನಾಳು ಗ್ರಾಮ ಪಂಚಾಯಿತಿಯಲ್ಲಿ ಪೂರ್ಣ 12 ಗುಂಟೆ ಖಾತೆ ನಂಃ8/ಎ ಮತ್ತು 8/ಬಿ ಎಂದು ಕೊಟ್ಟಿದ್ದಾರೆ. ಪಂಚಾಯಿತಿ ಖಾತೆಗೆ ಚಕ್ಕುಬಂದಿಯನ್ನು ನಮೂದಿಸುವಾಗ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕೆನ್ನಾಳು ಮಂಡಲ ಪಂಚಾಯಿತಿಯಲ್ಲಿ ನಾನು ಪ್ರದಾನನಾಗಿದ್ದೆ ಎಂದರೆ ಸರಿ. ನನ್ನ ಪ್ರಬಾವ ಬೀರಿ ಸುಳ್ಳು ಚೆಕ್ಕುಬಂದಿ ತೋರಿಸಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಸರ್ವೇ ನಂಃ131/5ರಲ್ಲಿನ 1 ¾ ಗುಂಟೆ ಸ್ವತ್ತಿನ ದಾವಾ-ಬಿ ಸ್ವತ್ತನ್ನು ನಾನು ಒತ್ತುವರಿ ಮಾಡಿ ಕಾಂಪೌಂಡ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಃ131/5ರ ದಕ್ಷಿಣಕ್ಕೆ ಮತ್ತು ಸರ್ವೇ ನಂಃ131/3ರ ಪೂರ್ವಕ್ಕೆ ಮದ್ಯದಲ್ಲಿ 1 ¾ ಗುಂಟೆ ಖಾಲಿ ಜಾಗವಿದ್ದು ಅದರಲ್ಲಿ ಕಟ್ಟಡವಾಗಲಿ, ಮರಗಳಾಗಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು

ಗೋಬರ್ ಗ್ಯಾಸ್ ತಯಾರಿಕ ಕಟ್ಟಡವು ಇದೆ ಎಂದು ನುಡಿಯುತ್ತಾರೆ. ಕಾಂಪೌಂಡ್ ಒಳಗೆ ವಾದಿಗೆ ಸೇರಿದ 1 ¾ ಗುಂಟೆ ಇದೆ ಎಂದರೆ ಸರಿಯಲ್ಲ. ನಿಪಿ-23 ರಿಂದ 26 ರಂತೆ ನಾನು ವಾದಿಗೆ ಸೇರಿದ 1 ¾ ಗುಂಟೆಯನ್ನು ಒತ್ತುವರಿ ಮಾಡಿರುವ ಬಗ್ಗೆ ನೋಟೀಸ್ ಬಂದಿದೆ ಎಂದರೆ ಸರಿಯಲ್ಲ. ಸರ್ವೇ ನಂಃ131/5 ರ ಹದ್ದುಬಸ್ತು ಅಳತೆ ಕಾರ್ಯಕ್ಕೆ ನಾನು ಸಹಕರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ತಿಳುವಳಿಕೆ ಇಲ್ಲ. ವಾದಿಗೆ ಸಂಬಂದಿಸಿದ ಹದ್ದುಬಸ್ತು ಮತ್ತು ದುರಸ್ತಿ ಕಾರ್ಯವು ಕ್ರಮವಾಗಿಲ್ಲ ಎಂದು ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ವಾದಿಗೆ ವಿರುದ್ದವಾಗಿ ಆದೇಶವಾಯಿತು ಎಂದರೆ ಸರಿ. ಸದರಿ ಆದೇಶವನ್ನು ವಾದಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ ಎಂದರೆ ಸರಿ. ಮಾನ್ಯ ಜಿಲ್ಲಾಧಿಕಾರಿಗಳು ನಿಪಿ-38 ರಂತೆ ಹದ್ದುಬಸ್ತು ಕ್ರಮವನ್ನು ಸ್ಥಿರೀಕರಿಸಿದ್ದಾರೆ ಎಂದರೆ ಸರಿ. ಸಾಕ್ಷಿಯ ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ.

**4**. ನನ್ನ ಸ್ವತ್ತಾದ ಸರ್ವೇ ನಂಃ131/3(ಎ) ಮತ್ತು ಸರ್ವೇ ನಂಃ131/3(ಬಿ)ರ ಸ್ವತ್ತನ್ನು ಇಂದಿಗೂ ಸಹ ಅಳತೆ ಮಾಡಿ ಹದ್ದುಬಸ್ತು ಗುರುತಿಸಿಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯ ಅದರ ಅವಶ್ಯಕತೆ ನನಗೆ ಇಲ್ಲವೆಂದು ನುಡಿಯುತ್ತಾರೆ. ನನ್ನ ಸ್ವತ್ತನ್ನು ಅಳತೆ ಮಾಡಿಸಿದರೆ ವಾದಿಗೆ ಸೇರಿದ 1 ¾ ಗುಂಟೆಯನ್ನು ನಾನು ಒತ್ತುವರಿ ಮಾಡಿರುವುದು ತಿಳಿದುಬರುತ್ತದೆ ಎಂದು ಇವತ್ತಿನ ವರೆಗೂ ಡಿ.ಸಿ. ನ್ಯಾಯಾಲಯದ ಆದೇಶದಂತೆ ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ.

**5**. ಸರ್ವೇ ನಂಃ131/3(ಬಿ)ರ 7 ಗುಂಟೆ ಸ್ವತ್ತನ್ನು ಪಂಚಾಯಿತಿಗೆ ಸೇರಿಸಿಕೊಂಡಾಗ ಅನ್ಯಕ್ರಾಂತ ಮಾಡಿಸಿಕೊಳ್ಳಲು ನಾನು ಪ್ರಯತ್ನಿಸಿಲ್ಲ. ಪಂಚಾಯಿತಿಯಲ್ಲಿ ಖಾತೆ ನಂಬರ್ 8/ಎ ಮತ್ತು 8/ಬಿ ಕೊಟ್ಟಾಗ ಎಷ್ಟೆಷ್ಟು ಅಡಿಗಳಿಗೆ ಖಾತೆಯಾಗಿದೆ ಎಂದು ನಾನು ನೋಡಿಲ್ಲ. ನನ್ನ ಸ್ವತ್ತಿನ ಬಗ್ಗೆ ನಿಖರವಾದ ಅಳತೆ ಗೊತ್ತಿರದಿದ್ದರೂ ಸರ್ವೇ ನಂಃ131/3(ಎ) ಮತ್ತು (ಬಿ) ಎಂದು ಸುಳ್ಳು ದಾಖಲೆಗಳ ಬಗ್ಗೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಃ131/5 ರ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ, ಸ್ವಾದೀನತೆ ಇಲ್ಲದಿದ್ದರು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ದಾಖಲೆಗಳು ನಾನೇ ಪ್ರಬಾವ ಬೀರಿ ಅನುಕೂಲಕ್ಕೆ ತಕ್ಕಂತೆ ಪಡೆದಿರುವ ದಾಖಲೆಗಳು ಎಂದರೆ ಸರಿಯಲ್ಲ.

**6**. ಸರ್ವೇ ನಂ:131/5 ರಲ್ಲಿ ಎಷ್ಟು ಸ್ವತ್ತುಗಳು ಅನ್ಯಕ್ರಾಂತವಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ:131/5 ರಲ್ಲಿ ಕುಳ್ಳಿರೇಗೌಡರ ಮಗ ಹೊಂಬೇಗೌಡರವರು ವಾದಿಯ ತಂದೆಯಿಂದ 3 ಗುಂಟೆ ಸ್ವತ್ತನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿ. ಸದರಿ 3 ಗುಂಟೆಗೆ ಹೊಂಬೇಗೌಡರು ಅನ್ಯಕ್ರಾಂತ ಮಾಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಸದರಿ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. 4 ನೇ ಪ್ರತಿವಾದಿಯು ಹೊಂಬೇಗೌಡರ ಸೊಸೆ. ನಾನು 2 ಮತ್ತು 4 ನೇ ಪ್ರತಿವಾದಿಯವರ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಪಡೆದಿಲ್ಲ. 2 ಮತ್ತು 4 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಯ ವಾರಸುದಾರರಿಗೆ ಈ ದಾವೆಯ ಸ್ವತ್ತಿನ ಮೇಲೆ ಮತ್ತು ವಾದ ಪತ್ರದ ವಿಷಯಕ್ಕೆ ಪ್ರಕರಣವನ್ನು ಮುಂದುವರೆಸಲು ಯಾವುದೇ ಇಚ್ಛೆ ಇಲ್ಲದಿದ್ದರು ನನ್ನ ಚಿತಾವಣೆಯ ಮೇರೆಗೆ ಪ್ರಕರಣವನ್ನು ಮುಂದುವರೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮೊದಲು ಲಿಖಿತ ತಕರಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ ಎಂದರೆ ಸರಿ. ದಿ:21.07.2018 ರಂದು ನ್ಯಾಯಾಲಯದಲ್ಲಿ ಪ್ರತಿವಾದಿ 2 ಮತ್ತು 4 ನೇ ಪ್ರತಿವಾದಿಯೊಂದಿಗೆ ಸೇರಿ ಮತ್ತೊಂದು ತಕರಾರನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

**7**. ದಿ:01.03.2016 ರಂದು 3 ನೇ ಪ್ರತಿವಾದಿಯು ವಾದಿಯೊಂದಿಗೆ ರಾಜಿ ಮಾಡಿಕೊಂಡಿರುವ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಾಜಿಯಾದ ನಂತರ 3 ನೇ ಪ್ರತಿವಾದಿಯ ಸ್ವತ್ತನ್ನು 4 ನೇ ಪ್ರತಿವಾದಿಯು ನನ್ನ ಮದ್ಯಸ್ತಿಕೆಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ-3, 3 ನೇ ಪ್ರತಿವಾದಿಯಿಂದ 4 ನೇ ಪ್ರತಿವಾದಿಯು ಖರೀದಿಸಿದ ಸ್ವತ್ತಿನ ಕ್ರಯ ಪತ್ರ ಎಂದರೆ ಸರಿ. ಹೊಂಬೇಗೌಡರ ಕುಟುಂಬದವರು ಮತ್ತು 2 ನೇ ಪ್ರತಿವಾದಿಯ ಸ್ವತ್ತಿಗೆ ಅಳತೆ, ವಗ್ಯೆರೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಸರ್ವೇ ನಂ:131/5 ರಲ್ಲಿ ಬೊರಮ್ಮನಿಗೆ 3 ಗುಂಟೆ, ಹೊಂಬೇಗೌಡರಿಗೆ 3 ಗುಂಟೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತು, ಉಳಿಕೆ ಸ್ವತ್ತಿನ ಮಾರಾಟಗಾರರು ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಗಳಿಗೆ ನಾನು ಸಾಕ್ಷಿದಾರನಾಗಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ 2 ನೇ ಖಂಡಿಕೆಯಲ್ಲಿರುವ ಅಂಶಗಳನ್ನು ನಾನು 2 ನೇ ಪ್ರತಿವಾದಿಯಿಂದ ತಿಳಿದುಕೊಂಡೆ. ಬೊರಮ್ಮನ ಆಸ್ತಿಯ ಬಗ್ಗೆ ನನಗೇನು ಗೊತ್ತಿಲ್ಲ. ಬೊರಮ್ಮನ ಕ್ರಯ ಪತ್ರದ ಅಂಶಗಳನ್ನು ಹೊರತು ಪಡಿಸಿ ನನಗೇ ಬೇರೆ ಏನು ಗೊತ್ತಿಲ್ಲ.

**8**. ಸರ್ವೇ ನಂಃ131/5 ರಲ್ಲಿ ಖರಾಬು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದ 4 ನೇ ಪುಟದಲ್ಲಿ ನಮ್ಮ ಆಸ್ತಿ ಗಡಿ ರೇಖೆಯ ಪೂರ್ವದಲ್ಲಿ ನಾಲೆಯಾಗಿದ್ದು, ಪಶ್ಚಿಮದಲ್ಲಿ ರಸ್ತೆಯಾಗಿದ್ದು, ಎರಡಕ್ಕೂ ಸಹ ಖರಾಬು ಇರುತ್ತದೆ ಎಂದು ಹೇಳಿ ಬರೆಸಿದ್ದೇನೆ. ಸದರಿ ಅಂಶಗಳಿಗೆ ದಾಖಲಾತಿಗಳು ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ 2 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಮಾಡಿಲ್ಲವೆಂದು ಹೇಳಿದ್ದೇನೆ. ಆದರೆ 2 ನೇ ಪ್ರತಿವಾದಿಯ ಸ್ವತ್ತಿನ ಅಳತೆ ನಾನು ಮಾಡಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ 4 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಮಾಡಿಲ್ಲವೆಂದು ಹೇಳಿದ್ದೇನೆ.

**9**. ಸಾಕ್ಷಿಗೆ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ಮಂಡ್ಯ ಜಿಲ್ಲೆ ರವರು ಪ್ರ.ಸಂ-ಜಿ.ತಾಂ.ಸಃ ಮೇಲ್ಮನವಿಃ15/2010-11 ರಲ್ಲಿ ಅಪೀಲುದಾರರಾದ ನನಗೆ, ಶಂಕರ್ ಮತ್ತು ನಾಗಮ್ಮನಿಗೆ ಹಾಗೂ ಎದುರುದಾರರಾದ ವಾದಿ ಚಂದ್ರಶೇಖರ್ ಮತ್ತು ತಹಶೀಲ್ದಾರ್ ರವರಿಗೆ ನೋಟೀಸನ್ನು ನೀಡಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ 3 ನೇ ಪ್ರತಿವಾದಿಯಾದ ಗುರುಮೂರ್ತಿ ಇಲ್ಲ ಎಂದರೆ ಸರಿ. <u>ಸದರಿ ನೋಟೀಸನ್ನು ನಿಪಿ-**50** ಎಂದು ಗುರುತಿಸಲಾಯಿತು</u>. ಸರ್ವೇ ನಂಃ131/3 ರಲ್ಲಿ ಯಾವುದೇ ಖರಾಬು ಇರುವುದಿಲ್ಲ. ವಕೀಲರು ಪೋಡಿ ದುರಸ್ತಿಯ ದಾಖಲಾತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ತಿದ್ದುಪಡಿಗಳು ಆಗಿದ್ದ ಕಾರಣ ಅದನ್ನು ಗುರುತಿಸಿಲ್ಲ.

**10**. ವಾದಿಯ ಕುಟುಂಬದ ವ್ಯವಹಾರಗಳಿಗೆ ನಾನು ಭಾಗವಹಿಸಿಲ್ಲ. ಸರ್ವೇ ನಂಃ131/5 ರಲ್ಲಿ ತೆಂಗಿನ ಮರಗಳು ಮತ್ತು ತೆಂಗಿನ ಸಸಿಗಳ ನರ್ಸರಿ ಇದೆ ಎಂದರೆ ಸರಿ. ವಾದಿ ಮತ್ತು ಅವರ ಸಹೋದರರು ಸರ್ವೇ ನಂಃ131/5 ರಲ್ಲಿ ವಿಭಾಗವಾಗಿದ್ದಾರೆ ಎಂದರೆ ಸರಿ. ಅವರು ಹೇಗೆ ಸ್ವತ್ತುಗಳನ್ನು ಹಂಚಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ವಾದಿಯ ಸ್ವತ್ತಿನ ಉತ್ತರಕ್ಕೆ ಅವರ ಅಣ್ಣ ಗುರುಮೂರ್ತಿ ಸ್ವತ್ತು ಇದೆ ಎಂದರೆ ಸರಿ. ಸರ್ವೇ ನಂಃ131/5 ರಲ್ಲಿ ಹರಿಯುತ್ತಿರುವ ನಾಲೆ ವಾದಿ ಮತ್ತು ನಮ್ಮ ಹಾಗೂ ಇತರೇ ಪ್ರತಿವಾದಿಗಳ ಸ್ವತ್ತನ್ನು ಬೇರ್ಪಡಿಸುವ ಹದ್ದುಬಸ್ತಿನ ಖಾಯಂ ನಿಶಾನೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಸದರಿ ಹದುಬಸ್ತಿನ ಖಾಯಂ ನಿಶಾನೆ ಬಗ್ಗೆ ಸರ್ವೇ ಇಲಾಖೆಯಿಂದ ದಾಖಲೆಯನ್ನು ಪಡೆದಿದ್ದೇನೆ. ಸರ್ವೇ

ಇಲಾಖೆಯಿಂದ ನಾನು ಪಡೆದ ದಾಖಲೆಗಳಲ್ಲಿ ನಾಲೆ ಇದೆ, ನ್ಯಾಯಾಲಯಕ್ಕೆ ಕೊಡಬಲ್ಲೆ. ನಾನು ನೋಡಿದಂತಹ ಹದ್ದುಬಸ್ತು ಖಾಯಂ ನಿಶಾನೆಯ ನಾಲೆ ಸರ್ವೇ ನಂಃ131/5ರ ನಡುವೆ ಹಾದು ಹೋಗಿದೆ ಎಂದರೆ ಸರಿಯಲ್ಲ. ನಾಲೆಯು ಯಾವ ಸರ್ವೇ ನಂಬರ್ ಸ್ವತ್ತಿನಲ್ಲಿ ಹಾದು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಃ131/5 ಅಥವಾ ಸರ್ವೇ ನಂಃ131/3ರಲ್ಲಿ ನಾಲೆ ಹಾದು ಹೋಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ನಾಲೆಯು ನಮ್ಮ ಮತ್ತು ವಾದಿಯ ಗಡಿಯನ್ನು ಗುರುತಿಸುವ ಖಾಯಂ ನಿಶಾನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳಿನ ಅಂಶ ಎಂದರೆ ಸರಿಯಲ್ಲ. ವಾದಿಯ 1 ¾ ಗುಂಟೆ ಸ್ವತ್ತನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ತಕರಾರಿಗೆ ವಿರುದ್ದವಾಗಿ ಸಾಕ್ಷ್ಯವನ್ನು ನುಡಿದಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 4ನೇ ಪ್ರತಿವಾದಿಗಳ ವಾರಸುದಾರರ ಸ್ವತ್ತುಗಳಿಗೂ ನನಗೂ ಯವುದೇ ಸಂಬಂದ ಇಲ್ಲದಿದ್ದರು ನಾನು ಒತ್ತುವರಿ ಮಾಡಿರುವ ಸ್ವತ್ತನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಅವರುಗಳನ್ನು ಉಪಕರಣವಾಗಿ ಉಪಯೋಗಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಸ್ವತ್ತನ್ನು ನ್ಯಾಯಾಲಯದಲ್ಲಿ ನಿಯೋಗಿಗಳ ಮೂಲಕ ಅಳತೆ ಮಡಿಸಿದ್ದಲ್ಲಿ ನನ್ನದೇನು ತಕರಾರು ಇಲ್ಲ.

ಮರು ವಿಚಾರಣೆ ಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು).**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**